ಬಲವಾಗಿ ಗುಮ್ಮಿದ. ಸಮತೋಲನ ಸ್ಥಿತಿಯಲ್ಲಿಲ್ಲದ ಮುಕ್ರಿಚ್ಚ ಆಯ ತಪ್ಪಿ ಅವನ ಸ್ಕೂಟರ್ ಮೇಲೆ ಬಿದ್ದ. ಸ್ಕೂಟರಿನ ಸೈಡ್ ಸ್ಟ್ಯಾಂಡ್ ಮಣ್ಣು ಹಿಡಿದು ಆಗಲೋ, ಈಗಲೋ ಎಂಬಂತಿತ್ತು. ಮುಕ್ರಿಚ್ಚ ಬಿದ್ದ ರಭಸಕ್ಕೆ ಸ್ಕೂಟರಿನ ಸೈಡ್ ಸ್ಟ್ಯಾಂಡ್ ಮುರಿದು ಹೋಗಿ ಅದು ದಡಾಲನೆ ಅಲ್ಲೇ ಇದ್ದ ಹಾಸುಗಲ್ಲಿನ ಮೇಲೆ ಬಿತ್ತು. ಅದಾಗಲೇ ಜೀರ್ಣವಾಗಿ ಆಗಲೋ, ಈಗಲೋ ಎಂಬ ಸ್ಥಿತಿಯಲ್ಲಿದ್ದ ಪೆಟ್ರೋಲು ಪೈಪು ಕಿತ್ತು ಹೋಗಿ ತುಂಡಾಗಿ ಬಿತ್ತು. ಪೆಟ್ರೋಲು ಎಲ್ಲಾ ಸೋರಿ ಹೋಯಿತು.

ಭಾವ ಮತ್ತು ಮುಕ್ರಿಚ್ಚ ಸೇರಿ ಹಾಗೂ ಹೀಗೂ ಸ್ಕೂಟರನ್ನು ಸಮಸ್ಥಿತಿಗೆ ತಂದು ಮೈನ್‌ಸ್ಟ್ಯಾಂಡ್ ಹಾಕಿ ನಿಲ್ಲಿಸಿದರು. ಸಿಟ್ಟಿನಿಂದ ಕುದಿಯುತ್ತಿದ್ದ ಮುಕ್ರಿಚ್ಚ ಅಲ್ಲೇ ಬೇಲಿಯಲ್ಲಿದ್ದ ನೆಕ್ಕಿ ಸಸಿಯ ಕೋಲಿನಿಂದ ಕುಟ್ಟನನ್ನು ಥಳಿಸತೊಡಗಿದರು. ತನ್ನ ಮುದ್ದು ಕುಟ್ಟನಿಗೆ ಬೀಳುತ್ತಿದ್ದ ಪೆಟ್ಟುಗಳನ್ನು ನೋಡಲಾಗದೆ ಅಲಿಮಾ ಓಡಿ ಬಂದು ಕುಟ್ಟನನ್ನು ಅಪ್ಪಿಕೊಂಡಳು. ಅವಳಿಗೂ ಎರಡು ಏಟು ಬಿತ್ತು. ಇದನ್ನೆಲ್ಲಾ ನೋಡುತ್ತಿದ್ದ ಅಕ್ಕ ಓಡಿ ಬಂದು ಮುಕ್ರಿಚ್ಚನ ಕೈಯಿಂದ ಕೋಲು ಹಿಡಿದೆಳೆದು, "ಉಪ್ಪ ಉಮ್ಮ ಇಲ್ಲದ ಮಗುವಿಗೆ ಹೀಗಾ ಹೊಡಿಯುವುದು" ಎಂದು ಅವನ ಮೇಲೆ ಹರಿಹಾಯ್ದಳು. ಭಾವ ಪೆಚ್ಚು ಮೋರೆ ಹಾಕಿ ಎಲ್ಲವನ್ನು ನೋಡುತ್ತಿದ್ದರು.

ತನ್ನನ್ನು ತಾನೇ ಸಂಭಾಳಿಸಿಕೊಂಡ ಮುಕ್ರಿಚ್ಚ ಸ್ಕೂಟರನ್ನು ಸ್ಟಾರ್ಟ್ ಮಾಡಲು ವಿಶ್ವ ಪ್ರಯತ್ನ ಮಾಡಿದ. ಪೆಟ್ರೋಲೆಲ್ಲಾ ಟ್ಯಾಂಕಿನಿಂದ ಸೋರಿ ಹೋಗಿದ್ದುದರಿಂದ ಅವನು ಕಿಕ್ ಕೊಟ್ಟಾಗಲೆಲ್ಲಾ ಸ್ಕೂಟರ್ ಟರ್ರ್ ಟರ್ರ್ ಎಂದು ದಯನೀಯ ಸದ್ದು ಹೊರಡಿಸುತ್ತಿತ್ತು. ಅದು ಅಸಹಾಯಕ ಎಂಜಿನ್ನಿನ ಆರ್ತನಾದ ಎಂದು ಅರ್ಥ ಮಾಡಿಕೊಂಡ ಮುಕ್ರಿಚ್ಚ ಇನ್ನು ತಾನು ಅಲ್ಲಿದ್ದು ಮಾಡುವುದೇನಿಲ್ಲ ಎಂದು ಪಂಚೆಯನ್ನು ಗಟ್ಟಿಯಾಗಿ ಕಟ್ಟಿಕೊಂಡು ಸ್ಕೂಟರು ತಳ್ಳತೊಡಗಿದ. ತಾನಿವತ್ತು ಬೆಳಗ್ಗೆ ಎದ್ದಾಗ ಮೊದಲು ಕಣ್ಣಿಗೆ ಬಿದ್ದ ಶನಿ ಯಾರು ಎಂದು ನೆನಪು ಮಾಡಿಕೊಳ್ಳಲು ಯತ್ನಿಸಿದ. ಮದರಸಕ್ಕೆ ಬರುವ ಮಕ್ಕಳಲ್ಲಿ ಯಾರೋ ಒಂದು ಹರಾಮು ಇರಬೇಕು. ಇಲ್ಲದಿದ್ದರೆ ಎರಡು ಸಲ ನೆಲಕ್ಕೆ ಬಿದ್ದು ಪಂಚೆ ಕಳಚಿ ಹೋಗಿ ಮರ್ಯಾದೆ ಮಣ್ಣು ಪಾಲಾಗುತ್ತಿರಲಿಲ್ಲ. ತನ್ನ ಗಡ್ಡವನ್ನು ಆಡು ಕಚ್ಚಿ ಎಳೆಯುತ್ತಿರಲಿಲ್ಲ ಅಂದುಕೊಂಡ.

ಮುಕ್ರಿಚ್ಚನ ಪಂಚೆಗೆ ಅಲ್ಲಲ್ಲಿ ಮಣ್ಣು ಮೆತ್ತಿಕೊಂಡಿತ್ತು. ಪಂಚೆಯ ಅಂಚು ಪೆಟ್ರೋಲ್‌ನಿಂದ ತೊಯ್ದು ವಾಸನೆ ಹೊರಡಿಸುತ್ತಿತ್ತು. ಪೆಟ್ರೋಲಿನ ವಾಸನೆಗೆ ಅವನಿಗೆ ತಲೆಸುತ್ತಿ ವಾಂತಿ ಬಂದಂತಾಗುತ್ತಿತ್ತು. ಹೇಗೋ ಸ್ಕೂಟರನ್ನು ತಳ್ಳಿಕೊಂಡು ಗ್ಯಾರೇಜಿಗೆ ಬಂದರೆ ಅವನು ನೂರೆಂಟು ಪ್ರಶ್ನೆಗಳನ್ನು ಎದುರಿಸಬೇಕಾಯಿತು. ಅವುಗಳಿಗೆ ಉತ್ತರಕೊಟ್ಟು ಅವನು ಹೈರಾಣಾದ. ಗ್ಯಾರೇಜಿನ ಮೆಕ್ಯಾನಿಕ್ಕು ಪೆಟ್ರೋಲು ಪೈಪು ಬದಲಾಯಿಸಿದ. ಅವನಿಗೆ ಕೊಡಲಿಕ್ಕೆ ಮುಕ್ರಿಚ್ಚನಲ್ಲಿ ಹಣವಿರಲಿಲ್ಲ. ಮುಕ್ರಿಚ್ಚನ ಅಸಹಾಯಕತೆಯನ್ನು ಅರ್ಥ ಮಾಡಿಕೊಂಡ ಮೆಕ್ಯಾನಿಕ್ಕು ರಿಪೇರಿಗೆ ಬಂದಿದ್ದ ಎರಡು ಬೈಕುಗಳಿಂದ ಅರ್ಧರ್ಧ ಲೀಟರು ಪೆಟ್ರೋಲು ತೆಗೆದು ಮುಕ್ರಿಚ್ಚನ ಸ್ಕೂಟರಿಗೆ ಹಾಕಿದ. ಮುಕ್ರಿಚ್ಚ ಅಂದು ಮೊದಲ ಬಾರಿಗೆ ಮುಖ ಅಗಲಿಸಿ, "ಶುಭಾನಲ್ಲಾ" ಎಂದು ವಂದಿಸಿ ಮದರಸಕ್ಕೆ ಬಂದ. ಅವನು ಹೊಟ್ಟೆಗೇನೂ ತಿಂದಿರದ ಕಾರಣ ಹೊಟ್ಟೆ ತಾಳ ಹಾಕುತ್ತಿತ್ತು. ಅಡಿಗೆಮನೆಗೆ ಹೋಗಿ ನೋಡಿದರೆ ಹಾಲಿನ ಪಾತ್ರೆ ಕೆಳಗೆ ಬಿದ್ದಿತ್ತು. ಕಳ್ಳ ಬೆಕ್ಕು ಎಲ್ಲಾ ಹಾಲು ಕುಡಿದು ಖಾಲಿ ಮಾಡಿ ಹೋಗಿತ್ತು. ಮುಕ್ರಿಚ್ಚ 'ಎಂಡೆ ರಬ್ಬೇ' ಎಂದು ಉದ್ಗಾರ ತೆಗೆದು ಮೇಜಿನ ಡ್ರಾಯರ್ ಎಳೆದು ಪರ್ಸ್ ಹಿಡಕೊಂಡು ಗ್ಯಾರೇಜಿಗೆ ಹೋಗಿ ಅವನ ಹಣ ನೀಡಿದ. ಅಲ್ಲಿಂದ ಪೆಟ್ರೋಲ್ ಬಂಕ್‌ಗೆ ಹೋಗಿ ಸ್ಕೂಟರಿನ ಟ್ಯಾಂಕನ್ನು ಭರ್ತಿ ಮಾಡಿಸಿದ. ಮದರಸಕ್ಕೆ ಬಂದವನು ಏನು ಮಾಡಲೂ ತೋಚದೆ ಹುರಿ ಹಗ್ಗದ ಮಂಚದಲ್ಲಿ ಬಿದ್ದುಕೊಂಡು, ಸೂರು ನೋಡಿ 'ಯಾ ಅಲ್ಲಾ' ಎಂದು ಉದ್ಗಾರ ತೆಗೆದ.

ಮುಕ್ರಿಚ್ಚನ ಏಟುಗಳು ಕುಟ್ಟನ ಮೈಯಲ್ಲಿ ಬಾಸುಂಡೆ ಬರಿಸಿದ್ದವು. ಅಲಿಮಾ ಅಕ್ಕನಲ್ಲಿ